1991

1. ಶ್ರೀ ಕೆ.ಶಿವರಾಮ್ ಕನ್ನಡ ಐ.ಎ.ಎಸ್ ಬೆಂಗಳೂರು ಮಹಾನಗರ ಪಾಲಿಕೆ
2. ಶ್ರೀ ಎಂ.ಆರ್.ಕಾಂಬ್ಳೆ ಕನ್ನಡ ಐ.ಎ.ಎಸ್ ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆ
3. ಶ್ರೀ ವಿಜಯ ಸಾಸನೂರ್ ಕನ್ನಡ ಐ.ಪಿ.ಎಸ್ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 25ನೆಯ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೀದರ್ ಜಿಲ್ಲೆಗೆ ವಾಯುದೂತ್ ಸೌಕರ್ಯ.

(998) ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವಕಲ್ಯಾಣ):- ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೀದರ್ ಜಿಲ್ಲೆಗೆ ವಾಯುದೂತ ಸೌಕರ್ಯ ಕಲ್ಪಿಸುವ ಉದ್ದೇಶ ಸರ್ಕಾರಕ್ಕಿದೆಯೇ.

ಆ ಇದ್ದಲ್ಲಿ ಎಂದಿನಿಂದ ಕಲ್ಪಿಸಲಾಗುವುದು ?

ಶ್ರೀ ಜಿ.ಹೆಚ್.ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):-

ಅ ಇಲ್ಲ.

ಆ ಉದ್ಭವಿಸುವುದಿಲ್ಲ.

ಬೆಳಗಾವಿ ಜಿಲ್ಲೆಯ ಹರಿನಾಲ ನೀರಾವರಿ ಯೋಜನೆ.

(1378)ಶ್ರೀ ಶಿವಾನಂದ.ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಭಾರೀ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಬೆಳಗಾವಿ ಜಿಲ್ಲೆಯ ಕರಿನಾಲಾ ನೀರಾವರಿಯೋಜನೆಗೆ ಮಂಜೂರಾತಿಯನ್ನು ಎಂದಿನಿಂದ ನೀಡಲಾಯಿತು?

ಆ ಈ ಯೋಜನೆಗಾಗಿ ಖರ್ಚು ಮಾಡಿದ ಹಣವೆಷ್ಟು ಹಾಗೂ ಮಂಜೂರಾದ ಹಣವೆಷ್ಟು?

ಇ ಈ ಯೋಜನೆಯಿಂದ ಎಷ್ಟು ಕ್ಷೇತ್ರಕ್ಕೆ ನೀರಾವರಿ ಆಗುವುದು ಮತ್ತು ಯಾವ ಯಾವ ಗ್ರಾಮದವರಿಗೆ ಈ ಯೋಜನೆಯಫಲ ದೊರೆಯುವುದು(ವಿವರವನ್ನೊದಗಿಸುವುದು)?

ಶ್ರೀ ಮಲ್ಲಾರಿಗೌಡ.ಎಸ್.ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ 16-8-1960ರಲ್ಲಿ 83 ಲಕ್ಷ ವೆಚ್ಚದ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಆ ಇದುವರೆಗೆ ಮಾಡಿದ ವೆಚ್ಚ 7.45 ಲಕ್ಷ ರೂ.ಗಳು ಮಂಜೂರಾದ ಹಣ 83 ಲಕ್ಷ ರೂ.ಗಳು.

ಇ 13 ಗ್ರಾಮಗಳಲ್ಲಿನ 11,350 ಎಕರೆಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಲಾಗಿತ್ತು. ಆದರೆ ಸಾಗುವಳಿ ಆಗುತ್ತಿರುವ ಭೂಮಿಯ ಮುಳುಗಡೆಯಾಗುವ ಹಿನ್ನೆಲೆಯಲ್ಲಿ ಬದಲಿ ಯೋಜನೆಗಳನ್ನು ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೈಲಹೊಂಗಲ ಬೈಲವಾಡಿ ನೀರಾವರಿ ಕೆರೆಗೆ ಈಗಿರುವ ನೀರಿನ ಸಾಮರ್ಥ್ಯವನ್ನು ಹೆಚ್ಚಿಸುವುದು.

(2349)ಶ್ರೀ ಶಿವಾನಂದ ಹೆಚ್.ಕೌಜಲಗಿ (ಬೈಲಹೊಂಗಲ):- ಮಾನ್ಯ ಸಣ್ಣ ನೀರಾವರಿ